KATHA

# ಮಾರ್ಗದರ್ಶಕರು ಮತ್ತು ಮನೆ ಗುರುಗಳಿಗೆ!




## ಬೋಧನಾ ಸಲಹೆಗಳು

ಕೆಳಗಿನ ಪುಟಗಳು ಮನೆ ಗುರುಗಳು ಮತ್ತು ಮಾರ್ಗದರ್ಶಕರು, ಶಿಕ್ಷಕರಿಗಾಗಿ. ನೀವು ಕೋವಿಡ್ ಸಮಯದಲ್ಲಿ ಮಕ್ಕಳೊಂದಿಗೆ ಅವರ ಮನೆಗಳಲ್ಲಿ ಕೆಲಸ ಮಾಡುತ್ತಿದ್ದರೆ, ನಿಮ್ಮ ವಿದ್ಯಾರ್ಥಿಗಳಿಗೆ ಮನೆಯನ್ನು ಶಾಲೆಯನ್ನಾಗಿ ಮಾಡಲು ಕಲಿಸಿ! ಹೆಚ್ಚಿನ ವಿಚಾರಗಳಿಗಾಗಿ ಈ ಮಾರ್ಗದರ್ಶಿಯನ್ನು ನೋಡಿ.

# ಬೋಧನಾ ಸಲಹೆಗಳು

ಎಲ್ಲಾ ಮಕ್ಕಳು ಕಥೆಗಳನ್ನು ಪ್ರೀತಿಸುತ್ತಾರೆ!
ಅವರು ಕಥೆಗಳನ್ನು ಕೇಳಲು ಇಷ್ಟಪಡುತ್ತಾರೆ.
ಅವರು ಕಥೆಗಳನ್ನು ಹೇಳಲು ಇಷ್ಟಪಡುತ್ತಾರೆ.

ಕೆಜಿ ಮಕ್ಕಳು ಕಲಿಯುವ ಮೊದಲ ಕೌಶಲ್ಯ - ಕಥೆ. ಅವರು ನಿಮ್ಮೊಂದಿಗೆ ಚೆನ್ನಾಗಿ ಕಲಿತರೆ, ಅವರು ಎಲ್ಲಾ ವಿಷಯಗಳನ್ನು ಓದಲು ಸಾಧ್ಯವಾಗುತ್ತದೆ!
ಅವರೊಂದಿಗೆ ನಿಮ್ಮ ಕೆಲಸವು ಅತ್ಯಂತ ಮುಖ್ಯವಾಗಿದೆ!

ಯಾವಾಗಲೂ ನೆನಪಿಡಿ - ನಿಮಗೆ ಆನಂದ ಸಿಕ್ಕಿದ್ದರೆ , ನಿಮ್ಮ ಮಕ್ಕಳ್ಳಿಗೂ ಆನಂದ ಸಿಗುತ್ತದೆ

ನಿಮ್ಮ ಮಕ್ಕಳೊಂದಿಗೆ ಪ್ರತಿದಿನ ಬಳಸುವ ಪದಗಳನ್ನು ಬಳಸಿ. ಕೆಜಿಯಲ್ಲಿ, ಅವರು ಪ್ರಾಥಮಿಕ ಶಾಲೆಗೆ ಪ್ರವೇಶಿಸಲು ಕಲಿಯುತ್ತಿದ್ದಾರೆ! ದೊಡ್ಡ ಹುಡುಗಿ ಅಥವಾ ದೊಡ್ಡ ಹುಡುಗನಂತೆ! ಆದ್ದರಿಂದ ಅವರಿಗೆ ನಾಯಕರಾಗಲು ಅವಕಾಶಗಳನ್ನು ನೀಡಿ!



# ಬಾಲವನದ ಗುರುಗಳಿಗೆ ಸಲಹೆಗಳು | 1

- ಕಥೆ ಹೇಳುವ ಮೂಲಕ ಕಲಿಸುವುದು
  - ತಮ್ಮ ಧ್ವನಿ ಮತ್ತು ಅವರ ಮೂಖಾಭಿನಯವನ್ನು ಹೇಗೆ ಬಳಸಬೇಕೆಂದು ಮಕ್ಕಳಿಗೆ ಕಲಿಸಿ.
  - ಅವರು ವಿವಿಧ ಪ್ರಾಣಿಗಳು ವರ್ತಿಸುವಂತೆ ಅವರೊಂದಿಗೆ ಆಟಗಳನ್ನು ಆಡಿ. ಜಿಂಕೆಯಂತೆ ನಡೆಯುವುದು. ಆನೆಯಂತೆ ತಮ್ಮ ಕಿವಿಗಳನ್ನು ಬಡಿಯುವುದು. ಮೊಲದಂತೆ ಜಿಗಿಯುವುದು. ಮತ್ತು ಇತ್ಯಾದಿ ...

# ಬಾಲವನದ ಗುರುಗಳಿಗೆ ಸಲಹೆಗಳು | 2

## ಮಕ್ಕಳೊಂದಿಗೆ ಕಥೆಯ ಮೂಲಕ ಹೇಗೆ ಆಟವಾಡುವುದು

- **ಕಥೆಯನ್ನು ಓದುವ ಸಮಯ! ಮಕ್ಕಳಿಗೆ ಖುಷಿ ತರುತ್ತದೆ!**
  - ಸರ್ಕಲ್ನಲ್ಲಿ ಕೂರಿಸಿ  ಒಟ್ಟಿಗೆ ಕಥೆಯನ್ನು ಓದುವುದು.( ಚಿತ್ರವನ್ನು ನೋಡಿ).
  - ನಿಮ್ಮ ಮಗುವಿಗೆ ಓದಲು ಸಾಧ್ಯವಾಗದಿರಬಹುದು, ಆದರೆ ಅವರೊಂದಿಗೆ ಓದುವುದು ಒಳ್ಳೆಯದು.
  - COOL! reading ಮಕ್ಕಳಿಗೆ ಮೋಜಿನ ಸಂಗತಿಯಾಗಿದೆ, ಅಲ್ಲಿ ಅವರು ಒಬ್ಬರಿಗೊಬ್ಬರು ಜೊತೆಗೂಡಿ  ಓದಬಹುದು ಅಥವಾ ಒಬ್ಬರೇ ಓದಬಹುದು !





# ಬಾಲವನದ ಗುರುಗಳಿಗೆ ಸಲಹೆಗಳು | 3

ಆಕ್ಷನ್ ಸಾಂಗ್ ಆಟ

- **ಆ್ಯಕ್ಷನ್ ಹಾಡುಗಳೊಂದಿಗೆ ಕಲಿಸುವುದು ಖುಷಿ ಕೊಡುತ್ತದೆ. ಮತ್ತು ಮಕ್ಕಳಿಗೂ ಉತ್ತಮ ವ್ಯಾಯಾಮ!**
  - "ಇಲ್ಲಿ ನಾವು ಮಾವಿನ ಮರವನ್ನು ಸುತ್ತುತ್ತೇವೆ" ಎಂಬ ಹಾಡನ್ನು ಕಲಿಯಿರಿ, ಆದ್ದರಿಂದ ನೀವು ಯಾವುದೇ ಸಮಸ್ಯೆಯಿಲ್ಲದೆ ಮಕ್ಕಳೊಂದಿಗೆ ಹಾಡಬಹುದು!
  - ಮಕ್ಕಳೊಂದಿಗೆ ಹಾಡಿ.
  - ಪ್ರತಿ ಪದ್ಯಕ್ಕೆ ಕ್ರಿಯೆಗಳನ್ನು ಮಾಡಿ.
  - ಹಾಡಿನ ಲಿಂಕ್ ಇಲ್ಲಿದೆ.

# ಬಾಲವನದ ಗುರುಗಳಿಗೆ ಸಲಹೆಗಳು | 4

ಮಾಸ್ಕ  ಹೇಗೆ ಧರಿಸುವುದು ಆಟ

- ಆಟಗಳು ಮತ್ತು ಪಜಲ್ ಗಳೊಂದಿಗೆ ಕಲಿಕೆ.
  - ಈ ಆಟವು ಮಾಸ್ಕ ಧರಿಸುವ ಸರಿಯಾದ ಮಾರ್ಗಗಳ ಬಗ್ಗೆ ಆಟವಾಗಿದೆ.
  - ಈ ಆಟವು ಮಾಸ್ಕ ಧರಿಸುವನಿಮ್ಮ ಮುಖದ ಸುತ್ತಲೂ ಮಾಸ್ಕನ್ನು  ಧರಿಸಿ ಮತ್ತು ನೀವು ಅದನ್ನು ಸರಿಯಾದ ರೀತಿಯಲ್ಲಿ ಅಥವಾ ತಪ್ಪು ರೀತಿಯಲ್ಲಿ ಧರಿಸಿದ್ದೀರಾ ಎಂದು ಊಹಿಸಲು ಮಕ್ಕಳನ್ನು ಕೇಳಿ.
  - ಮಾಸ್ಕನ್ನು ಧರಿಸಲು ತಪ್ಪು ಮಾರ್ಗಗಳಾವುವು ಎಂದು ತಿಳಿಯಲು ಬಲಗಡೆಗೆ  ನೋಡಿ



# ಬಾಲವನದ ಗುರುಗಳಿಗೆ ಸಲಹೆಗಳು | 5

ವೀಡಿಯೊಗಳು ಅಥವಾ ದೂರದರ್ಶನದ ಮೂಲಕ ಕಲಿಯುವುದು

## ವೀಡಿಯೊಗಳೊಂದಿಗೆ ಕಲಿಕೆ

ಈ ವೀಡಿಯೊವನ್ನು ಪ್ಲೇ ಮಾಡಿ

- https://www.youtube.com/watch?v=K_C8IEOHMK0
- ಈ ಆಟವನ್ನು ನೆಲದ  ಮೇಲೆ ಬರೆಯಿರಿ. ಮನೆಯಲ್ಲಿ ಕೋವಿಡ್ ಸಮಯದಲ್ಲಿ ಸುರಕ್ಷಿತ ಸ್ಥಳದಲ್ಲಿ ಮಕ್ಕಳಿಗೆ ಬೇಕಾದಂತೆ ಆಟವಾಡಲು ಬಿಡಿ.
- ಅವರು ಮುಂದೆ ಏನು ಮಾಡಬೇಕೆಂದು ತಿಳಿಯದವರಂತೆ ನೋಡಿದರೆ ಅವರಿಗೆ ಮೃದುವಾಗಿ ಮಾರ್ಗದರ್ಶನ ನೀಡಿ..

**ಟಿವಿ.** ನೀವು ವೀಡಿಯೊ ಪ್ಲೇಯರ್ ಹೊಂದಿಲ್ಲದಿದ್ದರೆ, ಚಿಂತಿಸಬೇಡಿ!

- ನಿಮ್ಮ ಮಕ್ಕಳ ಮೆಚ್ಚಿನ ದೂರದರ್ಶನ ಕಾರ್ಯಕ್ರಮವನ್ನು ಕಂಡುಹಿಡಿಯಿರಿ.
- ಮತ್ತು ಅಲ್ಲಿ ಒಂದು ಪಾತ್ರದೊಂದಿಗೆ ಅವರ ಸ್ವಂತ ಕಥೆಯನ್ನು ಹೇಳಲು ನೀವು ಅವರನ್ನು ಕೇಳಬಹುದು. ಅಥವಾ ಅವರು ಇಷ್ಟಪಡುವ ಪಾತ್ರದಂತೆ ನಟಿಸಿ. ಅಥವಾ ... ಟಿವಿ ಕಾರ್ಯಕ್ರಮದೊಂದಿಗೆ ಮನೆಯಲ್ಲಿಯೂ ಸಹ ಮಕ್ಕಳು ಮಾಡಬಹುದಾದ ಮೋಜಿನ ವಿಷಯಗಳನ್ನು ಯೋಚಿಸಿ!

# ಬಾಲವನದ ಗುರುಗಳಿಗೆ ಸಲಹೆಗಳು | 6

ಭೂಮಿ ತಾಯಿಯನ್ನು ನೋಡಿಕೊಳ್ಳುವುದು

- ಭೂಮಿ ತಾಯಿ! ನಾವು ಅವಳನ್ನು ನೋಡಿಕೊಳ್ಳದ ಕಾರಣ ದುಃಖವಾಗಿದ್ದಾಳೆ.

ಹೇಗೆ ಎಂದು ಮಕ್ಕಳಿಗೆ ತೋರಿಸಿ –

- ಮರ ಗಿಡಗಳನ್ನು ಹೇಗೆ ನೋಡಿಕೊಳ್ಳಬೇಕು.ಎಲೆಗಳನ್ನು ಕೀಳದಂತೆ .
- ಪ್ರಾಣಿಗಳ ಕಾಳಜಿ ಹೇಗೆ ಮಾಡಬೇಕು . ಪುಟ್ಟ ನಾಯಿಮರಿ ಅಥವಾ ಬೆಕ್ಕುವಿನ ಕಾಳಜಿ . ಮನುಷ್ಯರ ಹಾಗೆ ಪ್ರಾಣಿಗಳಿಗೂ ನೋವಾಗುತ್ತದೆ.
- ನೀವು ಬಯಸಿದರೆ, ಒಂದು ಸ್ಪೆಷಲ್ ರೀಡಿಂಗ್ ಸೆಷನ್ ನಲ್ಲಿ ಮರಿ ಪ್ರಾಣಿಗಳ ಕಥೆಯನ್ನು ಓದಬಹುದು.

